ಕರ್ನಾಟಕ ವಿಧಾನ ಪರಿಷತ್ತು

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ	774
ಸದಸ್ಯರ ಹೆಸರು	ಆರ್ ಚೌಡರೆಡ್ಡಿ ತೂಪಲ್ಲಿ (ಪದವೀಧರರ ಕ್ಷೇತ್ರ)
ಉತ್ತರಿಸಬೇಕಾದ ದಿನಾಂಕ	10.03.2020
ಉತ್ತರಿಸುವ ಸಚಿವರು	ಗಣಿ ಮತ್ತು ಭೂವಿಜ್ಞಾನ ಸಚಿವರು

ಕ್ರ ಸಂ	ಪ್ರಶ್ನೆಗಳು	ಉತ್ತರ
ಅ.	ರಾಜ್ಯದಲ್ಲಿ ಜಿಲ್ಲಾ ಖನಿಜ ಪ್ರತಿಷ್ಠಾನ ಟ್ರಸ್ಟ್ (DMFT)ಗಳು ಅಸ್ತಿತ್ವದಲ್ಲಿ ಇವೆಯೇ; **ಹಾಗಿದ್ದಲ್ಲಿ** ಅವು ಯಾವುವು; ಇದರ ಸ್ಥಾಪನೆಯ ಉದ್ದೇಶಗಳೇನು; **(ವಿವರವಾದ** ಮಾಹಿತಿ ನೀಡುವುದು**)**	ರಾಜ್ಯದ 30 ಜಿಲ್ಲೆಗಳಲ್ಲಿ, ಜಿಲ್ಲಾ ಖನಿಜ ಪ್ರತಿಷ್ಠಾನ ಟ್ರಸ್ಟ್ (DMFT)ಗಳು ಅಸ್ತಿತ್ವದಲ್ಲಿರುತ್ತವೆ. ಭಾರತ ಸರ್ಕಾರವು ಎಂ.ಎಂ. (ಡಿ&ಆರ್) ಕಾಯ್ದೆ, 1957ಗೆ ದಿನಾಂಕ 12.01.2015 ರಿಂದ ಅನ್ವಯವಾಗುವಂತೆ ತಿದ್ದುಪಡಿ ಮಾಡಿದ್ದು, ಸದರಿ **ತಿದ್ದು**ಪಡಿ ಕಾಯ್ದೆಯ ಕಲಂ **9B** ರಡಿ ಗಣಿ ಭಾಧಿತ ಪ್ರದೇಶಗಳಲ್ಲಿ ಜಿಲ್ಲಾ ಖನಿಜ ಪ್ರತಿಷ್ಠಾನ ಟ್ರಸ್ಟ್ (ಡಿಎಂಎಫ್) ಎಂಬ ಲಾಭರಹಿತ ಟ್ರಸ್ಟ್ ಸ್ಥಾಪಿಸಲು ಸೂಚಿಸಿರುತ್ತದೆ. ಅದರಂತೆ ರಾಜ್ಯಾದ್ಯಂತ ಜಿಲ್ಲಾ ಖನಿಜ ಪ್ರತಿಷ್ಠಾನ ಟ್ರಸ್ಟ್ ಸ್ಥಾಪಿಸಲಾಗಿರುತ್ತದೆ. ಮುಂದುವರೆದು, ಭಾರತ ಸರ್ಕಾರವು ಹೊರಡಿಸಿರುವ ಪ್ರಧಾನ ಮಂತ್ರಿ ಖನಿಜ ಕ್ಷೇತ್ರ ಕಲ್ಯಾಣ ಯೋಜನೆ (ಪಿಎಂಕೆಕೆಕೆವೈ)ಗೆ ಸಂಬಂಧಿಸಿದ ಮಾರ್ಗಸೂಚಿ ಗಳನ್ವಯ ಜಿಲ್ಲಾ ಖನಿಜ **ಪ್ರತಿಷ್ಠಾನ** ಟ್ರಸ್ಟ್ ನಿಧಿಯನ್ನು ಗಣಿಗಾರಿಕೆ ನಡೆಯುತ್ತಿರುವ **ಗಣಿ** ಪ್ರದೇಶದ ಅಭಿವೃದ್ಧಿ ಹಾಗೂ ಜನರ ಕಲ್ಯಾಣದ ಉದ್ದೇಶಕ್ಕಾಗಿ ಸ್ಥಾಪಿಸಲಾಗಿರುತ್ತದೆ.
ಆ	ಸದರಿ ಟ್ರಸ್ಟ್ ಗಳ **ಅಡಿ** ಹಾಲಿ ಲಭ್ಯವಿರುವ **ಅನುದಾನವೆಷ್ಟು**; ಸದರಿ ಅನುದಾನ**ವನ್ನು** ಯಾವ ಮೂಲದಿಂದ **ಶೇಖರಿ**ಸಲಾಗಿದೆ; (ಜಿಲ್ಲಾವಾರು ಮಾಹಿತಿ ನೀಡುವುದು)	ರಾಜ್ಯದಲ್ಲಿ 2015-16 **ರಿಂದ** 2019-20 (ಜನವರಿ 2020ರ ವರೆಗೆ) ಜಿಲ್ಲಾ ಖನಿಜ **ಪ್ರ**ತಿಷ್ಠಾನ ಟ್ರಸ್ಟ್ ಅಡಿಯಲ್ಲಿ (ಡಿಎಂಎಫ್) ರೂ.1842.21 **ಕೋಟಿ** ಸಂಗ್ರಹಿಸಲಾಗಿರುತ್ತದೆ. ಎಂ.ಎಂ.(ಡಿ&ಆರ್) ಕಾಯ್ದೆ, 1957 ಹಾಗೂ ಕರ್ನಾಟಕ ಉಪ ಖನಿಜ ರಿಯಾಯಿತಿ (ತಿದ್ದುಪಡಿ) ನಿಯಮಗಳು, 2016 ರನ್ವಯ **ಗಣಿ** ಗುತ್ತಿಗೆ ಹಾಗೂ ಕಲ್ಲು ಗಣಿ ಗುತ್ತಿಗೆದಾರರಿಂದ ರಾಜಧನದ ಮೇಲೆ ಅನ್ವಯವಾಗುವಂತೆ ಶೇ. 30 **ಹಾಗೂ** ಶೇ.10ರಂತೆ ಜಿಲ್ಲಾ ಖನಿಜ ಪ್ರತಿಷ್ಠಾನ ನಿಧಿ **ಟ್ರಸ್ಟ್** ಸಂಗ್ರಹಿಸಲಾಗುತ್ತಿದೆ (ಜಿಲ್ಲಾವಾರು ಮಾಹಿತಿ **ಅನುಬಂಧ-1**ರಲ್ಲಿ ಲಗತ್ತಿಸಿದೆ).

--2

ಇ.	ಈ ಅನುದಾನವನ್ನು ಯಾವ ಯಾವ ಕಾರ್ಯಗಳಿಗೆ ವಿನಿಯೋಗಿಸ ಲಾಗುವುದು; ಹಾಲಿ ಇರುವ ಮಾರ್ಗಸೂಚಿಗಳೇನು; ಇಲ್ಲಿಯವರೆಗೆ ಖರ್ಚಾಗದೆ ಉಳಿದಿರುವ ಅನುದಾನವೆಷ್ಟು; (ಜಿಲ್ಲಾವಾರು ವಿವರ ನೀಡುವುದು)	ಭಾರತ ಸರ್ಕಾರವು ಹೊರಡಿಸಿರುವ ಪ್ರಧಾನ ಮಂತ್ರಿ ಖನಿಜ ಕ್ಷೇತ್ರ ಕಲ್ಯಾಣ ಯೋಜನೆಗೆ (ಪಿಎಂಕೆಕೆಕೆವೈ) ಸಂಬಂಧಿಸಿದ ಮಾರ್ಗಸೂಚಿಗಳನ್ವಯ ಜಿಲ್ಲಾ ಖನಿಜ ಪ್ರತಿಷ್ಠಾನ ಟ್ರಸ್ಟ್ (ತಿದ್ದುಪಡಿ) ನಿಯಮಗಳು, 2016ರ ನಿಯಮ **18** ರಂತೆ ಡಿಎಂಎಫ್ ನಿಧಿಯಲ್ಲಿ ಸಂಗ್ರಹಿಸಿದ ಒಟ್ಟು ಮೊತ್ತದಲ್ಲಿ **ಶೇ. 10** ರಷ್ಟು ಎನ್ಡೋಮೆಂಟ್‌ಗಾಗಿ, ಶೇ. 5 ಆಡಳಿತಾತ್ಮಕ ವೆಚ್ಚಕ್ಕಾಗಿ ಹಾಗೂ ಉಳಿದ ಶೇ. 85 ನ್ನು ಶೇ 60:40 ಅನುಪಾತದಂತೆ ಈ ಕೆಳಕಂಡ ಅಭಿವೃದ್ಧಿ ಕಾರ್ಯಗಳಿಗೆ ಬಳಸಲಾಗುತ್ತಿದೆ. **ಶೇಕಡ 60 ರಷ್ಟು ಹೆಚ್ಚಿನ ಆದ್ಯತೆಯ ಪ್ರದೇಶಗಳಲ್ಲಿ ಆಯೋಜಿಸುವ ಕಾರ್ಯಕ್ರಮಗಳು:** 1) ಕುಡಿಯುವ ನೀರು. 2) ಪರಿಸರ ಸಂರಕ್ಷಣೆ ಮತ್ತು ಮಾಲಿನ್ಯ ನಿಯಂತ್ರಣ ಕ್ರಮಗಳು. 3) ಆರೋಗ್ಯ. 4) ಶಿಕ್ಷಣ. 5) ಮಹಿಳಾ ಮತ್ತು ಮಕ್ಕಳ ಕಲ್ಯಾಣ ಸಂಬಂಧ ಕಾರ್ಯಕ್ರಮ. 6) ವಯಸ್ಸಾದ ಮತ್ತು ಅಂಗವಿಕಲ ವ್ಯಕ್ತಿಗಳ ಕಲ್ಯಾಣ. 7) ಕೌಶಲ್ಯ ಅಭಿವೃದ್ಧಿ. 8) ನೈರ್ಮಲ್ಯತೆ. **ಶೇಕಡ 40 ರಷ್ಟು ಇತರೆ ಆದ್ಯತೆಯ ಪ್ರದೇಶಗಳಲ್ಲಿ ಆಯೋಜಿಸುವ ಕಾರ್ಯಕ್ರಮಗಳು:** 1) ಭೌತಿಕ ಮೂಲ ಸೌಕರ್ಯ. 2) ನೀರಾವರಿ. 3) ಶಕ್ತಿ ಮತ್ತು ನೀರಿನ ಅಭಿವೃದ್ಧಿ. 4) ಗಣಿಗಾರಿಕೆ ಜಿಲ್ಲೆಗಳಲ್ಲಿ ಪರಿಸರದ ಗುಣಮಟ್ಟ ಹೆಚ್ಚಿಸುವುದು. ಡಿಎಂಎಫ್ (ಪಿಎಂಕೆಕೆಕೆವೈ) ಯೋಜನೆಗಳಿಗೆ ಅನುಮೋದಿತ ಕ್ರಿಯಾಯೋಜನೆ ಮೊತ್ತ, ಖರ್ಚಾದ ಮೊತ್ತ ಹಾಗೂ ಉಳಿದ ಮೊತ್ತ ಜಿಲ್ಲಾವಾರು ವಿವರ **ಅನುಬಂಧ-1 ರಲ್ಲಿ** ಲಗತ್ತಿಸಿದೆ.
ಈ.	ಸದರಿ ಅನುದಾನದಡಿಯ ಕಾಮಗಾರಿಗಳು ಯಾವುವು? (ವಿವರವಾದ ಮಾಹಿತಿ ನೀಡುವುದು)	ಡಿಎಂಎಫ್ ಯೋಜನೆಯಡಿ ಕೈಗೊಂಡ ಕಾಮಗಾರಿಗಳ ವಿವರ **ಅನುಬಂಧ-2 ರಲ್ಲಿ** ಲಗತ್ತಿಸಿದೆ.

ಸಂಖ್ಯೆ: ಸಿಐ 116 ಎಂಎಂಎನ್ 2020

(ಸಿ.ಸಿ. ಪಾಟೀಲ)

ಗಣಿ ಮತ್ತು ಭೂವಿಜ್ಞಾನ ಸಚಿವರು

ಅನುಬಂಧ-1

ಡಿಎಂಎಫ್ ಅಡಿಯಲ್ಲಿ ಜಿಲ್ಲಾವಾರು ಸಂಗ್ರಹವಾದ, ಖರ್ಚಾದ ಹಾಗೂ ಬಾಕಿ ಉಳಿದ ಮೊತ್ತದ ವಿವರ

ಕ್ರಸಂ	ಜಿಲ್ಲೆಗಳ ಹೆಸರು	ಸಂಗ್ರಹವಾದ ಒಟ್ಟು ಡಿಎಂಎಫ್ ಮೊತ್ತ ಜನವರಿ 2020ರ ವರೆಗೆ	ರೂ.ಲಕ್ಷಗಳಲ್ಲಿ ಅನುಮೋದಿತ ಕ್ರಿಯಾ ಯೋಜನೆಯ ಮೊತ್ತ	ಖರ್ಚಾದ ಮೊತ್ತ	ಬಾಕಿ ಉಳಿದ ಮೊತ್ತ
1	ಬಳ್ಳಾರಿ	108573.41	140423.96	19105.50	89467.91
2	ಕಲಬುರಗಿ	27347.81	17097.34	3751.76	23596.05
3	ಚಿತ್ರದುರ್ಗ	14315.86	5172.25	788.85	13527.01
4	ಬಾಗಲಕೋಟೆ	5709.73	1912.76	898.85	4810.88
5	ಕೊಪ್ಪಳ	4073.36	4549.52	1450.01	2623.35
6	ರಾಯಚೂರು	3154.23	2028.40	944.52	2209.71
7	ಚಿಕ್ಕಬಳ್ಳಾಪುರ	2596.24	1442.86	531.82	2064.42
8	ರಾಮನಗರ	2566.56	610.00	416.85	2149.71
9	ಬೆಂಗಳೂರು ನಗರ	2263.86	995.00	0.00	2263.86
10	ತುಮಕೂರು	2088.17	1699.22	488.22	1599.95
11	ಚಾಮರಾಜನಗರ	1639.74	484.15	260.54	1379.20
12	ಬೆಳಗಾವಿ	1638.71	144.50	0.00	1638.71
13	ಬೆಂಗಳೂರು ಗ್ರಾಮಾಂತರ	1637.11	1104.30	1026.71	610.40
14	ಉತ್ತರ ಕನ್ನಡ	1032.39	769.63	533.96	498.43
15	ಹಾಸನ	717.86	653.63	501.58	216.28
16	ದಕ್ಷಿಣ ಕನ್ನಡ	669.84	165.50	94.00	575.84
17	ಉಡುಪಿ	537.36	118.40	95.16	442.20
18	ಚಿಕ್ಕಮಗಳೂರು	495.92	643.76	432.51	63.41
19	ಗದಗ	480.91	114.22	64.37	416.54
20	ಹಾವೇರಿ	449.57	132.03	99.01	350.56
21	ಕೋಲಾರ	442.28	161.81	65.00	377.28
22	ಧಾರವಾಡ	391.16	265.40	46.41	344.75
23	ದಾವಣಗೆರೆ	362.82	275.94	275.94	86.88
24	ವಿಜಯಪುರ	339.90	410.22	108.37	231.53
25	ಶಿವಮೊಗ್ಗ	177.06	56.94	26.85	150.21
26	ಮಂಡ್ಯ	141.74	0.00	0.00	141.74
27	ಮೈಸುರು	109.83	22.38	9.44	100.39
28	ಬೀದರ್	108.93	47.77	0.00	108.93
29	ಯಾದಗಿರಿ	87.28	36.96	12.35	74.93
30	ಕೊಡಗು	72.02	14.50	0.00	72.02
ಒಟ್ಟು		184221.66	181553.35	32028.58	152193.08

H-C Han
ಉಪ ನಿರ್ದೇಶಕರು(ಖಿಅ)

ಅನುಬಂಧ-2

ಡಿಎಂಎಫ್ ನಿಧಿಯಲ್ಲಿ ಅನುಮೋದಿತ ಕ್ರಿಯಾಯೋಜನೆಗಳಲ್ಲಿ ಅಭಿವೃದ್ಧಿ ಕಾಮಗಾರಿಗಳಿಗೆ ಹಂಚಿಕೆಯಾದ ಮೊತ್ತ ಹಾಗು ಖರ್ಚುಮಾಡಿದ ವಿವರಗಳು (ಜನವರಿ 2020ರ ವರೆಗೆ)

(ರೂ. ಲಕ್ಷಗಳಲ್ಲಿ)

ಕ್ರಮ ಸಂಖ್ಯೆ.	ಅಭಿವೃದ್ಧಿಯಲ್ಲಿರುವ ಯೋಜನೆ/ಕಾಮಗಾರಿಗಳ ವಿವರಗಳು	ಕಾಮಗಾರಿಗಳ ಸಂಖ್ಯೆ	ಹಂಚಿಕೆಯಾದ ಮೊತ್ತ	ಈವರೆಗೆ ಖರ್ಚು ಮಾಡಿದ ಮೊತ್ತ
1	ಕುಡಿಯುವ ನೀರು	756	22343.37	3984.12
2	ಪರಿಸರ ಮಾಲಿನ್ಯ ತಡೆಗಟ್ಟುವಿಕೆ ನಿಯಂತ್ರಣ ಕಾರ್ಯಗಳಿಗೆ	74	7124.22	516.11
3	ಆರೋಗ್ಯ ರಕ್ಷಣ	294	24846.25	2653.40
4	ಶಿಕ್ಷಣ	1151	25062.42	7242.58
5	ಮಹಿಳಾ ಮತ್ತು ಮಕ್ಕಳ ಕಲ್ಯಾಣ ಸಂಬಂಧ ಕಾರ್ಯಕ್ರಮ	374	9236.78	892.08
6	ವಯಸ್ಸಾದ ಮತ್ತು ಅಂಗವಿಕಲ ವ್ಯಕ್ತಿಗಳ ಕಲ್ಯಾಣ.	89	1574.86	464.88
7	ಕೌಶಲ್ಯಾಭಿವೃದ್ಧಿ ಕಾರ್ಯಗಳಿಗೆ	229	6441.96	868.34
8	ನೈರ್ಮಲ್ಯತೆ	160	14791.72	561.17
9	ಭೌತಿಕ ಮೂಲಸೌಕರ್ಯ	668	49313.61	11836.49
10	ನೀರಾವರಿ	62	9573.66	1535.36
11	ಶಕ್ತಿ ಮತ್ತು ನೀರಿನ ಅಭಿವೃದ್ಧಿ	283	6406.05	1105.08
12	ಇನ್ನಿತರೆ ಗಣಿಗಾರಿಕೆ ಜಿಲ್ಲೆಗಳಲ್ಲಿ ಪರಿಸರದ ಗುಣಮಟ್ಟ ಹೆಚ್ಚಿಸುವುದು.	40	4838.45	368.98
	ಒಟ್ಟು	**4180**	**181553.35**	**32028.58**

CI 116 mmn 2020

HCR
ಉಪ ನಿರ್ದೇಶಕರು(ಖಆ)